**ಒ ಎಸ್ ನಂ. 29/2020**
**ಪಿ ಡಬ್ಲ್ಯೂಃ 03**

**ದಿಃ 27-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ 15(ಎ) ದಿಂದ (ಸಿ) ಪರ ಶ್ರೀ ಎನ್ ಎಚ್ ಪಿ ವಕೀಲರಿಂದಃ**

ಶಾಂತವ್ವ ಅಣ್ಣ ತಮ್ಮಂದಿರು ದಿಗಂಬರ ಇವರ ವಿರುದ್ಧ ದಾವೆ ಸಲಿಲಸಿದ್ದಾರೆ. ನಾನು ದಾವಾ ಆಸ್ತಿಗಳ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ದಾಖಲೆಗಳನ್ನು ನೋಡಿ ಕೇಳಿ ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಎಂದು ನಾನೆ ಹೇಳಿ ಬರೆಸಿದ್ದೇನೆ. ಈ ಬಗ್ಗೆ ಯಾವುದೆ ದಾಖಲೆಗಳನ್ನು ನಾನು ನೋಡಿಲ್ಲ. ವಾದಿಯರು ಹೇಳಿದ್ದರಿಂದ ಬರೆಸಿದ್ದೇನೆ. ದಾವಾ ಅನುಸೂಚಿ-9 ರಿಂದ 11 ರ ಆಸ್ತಿಗಳನ್ನು ದಿಗಂಬರವರು ಖರೀದಿಸಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಜಮೀನು ಖರೀದಿಸಿದಾಗಿನಿಂದ ದಿಗಂಬರವರು ತಮ್ಮ ಜೀವಿತ ಕಾಲದಲ್ಲಿ ಅವುಗಳಲ್ಲಿ ಸ್ವಾಧೀನದಲ್ಲಿ ಇದ್ದರು ಅಂದರೆ ಸರಿಯಲ್ಲ. ದಿಗಂಬರ ಇವರು ಖರೀದಿಸಿದ ಆಸ್ತಿಗಳ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ಅವು ಯಾವವು ಎನ್ನುವದು ಗೊತ್ತಿಲ್ಲದಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರ ಗೊತ್ತಿಲ್ಲದಿದ್ದರೂ ಕೂಡಾ ವಾದಿಯರು ಸ್ವಾಧೀನದಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ**

(ಪ್ರತಿವಾದಿ ನಂ 15(ಡಿ) ಹಾಗೂ ಅವರ ಪರ ವಕೀಲರು ಹಾಜರ ಇರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.